# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ ನಂ.8975/22** **ಪಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಮಹದೇವಸ್ವಾಮಿ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 07-03-2026. |

**ಪಾಟೀ ಸವಾಲುಃ ಶ್ರೀ ಸಿ ವಿ ವಕೀಲರಿಂದಃ**

ಆರೋಪಿ ನನಗೆ 5 ವರೆ ವರ್ಷಗಳಿಂದ ಪರಿಚಯ ಇರುತ್ತದೆ. ನಾವಿಬ್ಬರೂ ಬರುವುದು ಹೋಗುವುದು ಮಾಡುತ್ತಿದ್ದೆವು ಆದ್ದರಿಂದ ನನಗೆ ಆರೋಪಿ ಪರಿಚಯ ಇರುತ್ತದೆ. ಆರೋಪಿ ಯ ಮೂಲಕ ಊರು ಯಾವುದೇ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವರು ವೈವಾಹಿಕ ಜೀವನದ ಬಗ್ಗೆಯೂ ನನಗೆ ಮಾಹಿತಿ ಇರುವುದಿಲ್ಲ. ಆರೋಪಿಯ ಕುಟುಂಬದ ಬಗ್ಗೆಯೂ ಸಹ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. 7,55,000/- ರೂಪಾಯಿಗಳನ್ನು ನೀಡಿರುತ್ತೀರಾ ಎಂದು ಹೇಳಿರುತ್ತೀರಾ ಸದರಿ ಹಣವನ್ನು ಯಾವ ಉದ್ದೇಶಕ್ಕಾಗಿ ನೀಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಆರೋಪಿಗೆ ನಾನು ಕೊಬ್ಬರಿ ವ್ಯಾಪಾರಕ್ಕಾಗಿ ಆರೋಪಿ ಗೆ ಹಣವನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿ ಎ ಪಿ ಎಂ ಸಿ ಅಂಗಡಿಯನ್ನು ಇಟ್ಟುಕೊಂಡಿರುತ್ತಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಅವರು ತುಮಕೂರಿನಲ್ಲಿ ವ್ಯಾಪಾರ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಆರೋಪಿ ತುಮಕೂರಿನಲ್ಲಿ ವ್ಯಾಪಾರ ಮಾಡುತ್ತಿದ್ದರು ಎಂದು ತೋರಿಸಲು ಯಾವುದಾದರೂ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದು

ನುಡಿಯುತ್ತಾರೆ. ಆರೋಪಿ ಮನೆಯ ವಿಳಾಸದಲ್ಲಿ ನೀವು ನೋಟೀಸನ್ನು ಕಳುಹಿಸಿರುವಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಆರೋಪಿಯ ಮನೆಯ ವಿಳಾಸದಲ್ಲಿ ನೋಟೀಸನ್ನು ಕಳುಹಿಸಿರುವುದಿಲ್ಲ ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ ಚೆಕ್ ಪ್ರಕರಣದಲ್ಲಿ ಆರೋಪಿಯ ಮನೆಯ ವಿಳಾಸಕ್ಕೆ ನೋಟೀಸನ್ನು ಕಳುಹಿಸಬೇಕು ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಆರೋಪಿ ನಿಮಗೆ ಯಾವ ದಿನಾಂಕದಂದು ಸಾಲ ಬೇಕು ಎಂದು ಕೇಳಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ದಿನಾಂಕ ಮತ್ತು ಯಾವ ತಿಂಗಳು ಎಂದು ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಾನು ಆರೋಪಿಗೆ 15 ದಿನಗಳು ಕಳೆದ ಬಳಿಕ ಸಾಲವನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಸಾಲ ಕೊಡುವಾಗ ನಿಮ್ಮನ್ನು ಹೊರತು ಪಡಿಸಿ ಬೇರೆ ಯಾರು ಸಾಕ್ಷಿಗಳು ಇದ್ದರು ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಸಾಲವನ್ನು ನೀವು ಕೊಡುವಾಗ ಆರೋಪಿ ಎಲ್ಲಿ ಕೆಲಸ ಮಾಡುತ್ತಿದ್ದರು ಎಂಬ ಪ್ರಶ್ನೆಗೆ ಸಾಕ್ಷಿಯು ಆರೋಪಿಯು ತುಮಕೂರಿನ ಎಸ್ ಪಿ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಆರೋಪಿಗೆ ಸಾಲವನ್ನು ಕೊಡುವ ಸಂದರ್ಭದಲ್ಲಿ ಅವನಿಗೆ ಎಷ್ಟು ಸಂಬಳ ಬರುತ್ತಿತ್ತು ಮತ್ತು ಯಾವ ವ್ಯವಹಾರವನ್ನು ಮಾಡುತ್ತಾರೆ ಎಂದು ನೀವು ಅವರಿಗೆ ಕೇಳಿರುವಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ಆರೋಪಿಗೆ 70 ರಿಂದ 80 ಸಾವಿರ ಸಂಬಳ ಬರುತ್ತಿತ್ತು ಮತ್ತು ಕೂಲಿ ಕೆಲಸ ಸಹ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ಸಾಲವನ್ನು ನೀಡಿರುತ್ತೇನೆ ಎಂದು ನೀವು ಯಾವುದಾದರೂ ಪತ್ರವನ್ನು ಬರೆಸಿಕೊಂಡಿರುವಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಯಾವುದೇ ಪತ್ರವನ್ನು ಬರೆಸಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ಡಿಗ್ರಿ ವರೆಗೆ ವಿಧ್ಯಾಬ್ಯಾಸವನ್ನು ಮಾಡಿದ್ದೇನೆ. ನಾನು ಚಿಲ್ಲರೆ ಬದನಾಳು ಗ್ರಾಮದಲ್ಲಿ ಇದೆ. ಚಿಲ್ಲರೆ ಅಂಗಡಿಯ ಲೈಸೆನ್ಸ್ ಮಾಡಿಕೊಂಡಿರುವುದಿಲ್ಲ. ಏಪ್ರೀಲ್ 2022 ರಲ್ಲಿ ನಿಮ್ಮ ಬಳಿ 7,55,000 ರೂಪಾಯಿಗಳು ಇತ್ತು ಎಂದು ತೋರಿಸಲು ನೀವು ಯಾವುದಾದರೂ ದಾಖಲೆಗಳನ್ನು ಹಾಜರುಪಡಿಸಿರುವಿರಾ

ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಬ್ಯಾಂಕಿನ ವ್ಯವಹಾರದ ಬಗ್ಗೆ ನನಗೆ ಗೊತ್ತು. 20 ಸಾವಿರ ಹಣಕ್ಕಿಂತ ಹಣವನ್ನು ವರ್ಗಾವಣೆ ಮಾಡಬೇಕಾದರೆ ಅದು ಚೆಕ್ ನ ಮೂಲಕ ಆರ್ ಟಿ ಜಿ ಎಸ್ ಮೂಲಕ ವರ್ಗಾವಣೆ ಮಾಡಬೇಕು ಎಂದು ನಿಯಮ ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಾನು ಆದಾಯ ಪಾವತಿದಾರನಲ್ಲ. ಆರೋಪಿ ಯಾವ ಗ್ರಾಮದವರು ಎಂದು ನಾನು ತಿಳಿದುಕೊಂಡಿರುವುದಿಲ್ಲ. ಆರೋಪಿ ನಿಮಗೆ ಯಾರ ಮುಖಾಂತರ ಪರಿಚಯ ಆಗಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಯಾರ ಮುಖಾಂತರ ಕೂಡ ಪರಿಚಯ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಬ್ಯಾಂಕ್ ನಲ್ಲಿ ಎಷ್ಟು ಬಾರಿ ಚೆಕ್ ಅನ್ನು ಹಾಜರುಪಡಿಸಿರುವಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಎರಡು ಸಲ ಚೆಕ್ ನ್ನು ಹಾಜರುಪಡಿಸಿರುತ್ತೇನೆ ಆದರೆ ನನಗೆ ಯಾವ ದಿನಾಂಕದಂದು ಹಾಜರುಪಡಿಸಿರುತ್ತೇನೆ ಎಂಬುದು ನೆನಪಿರುವುದಿಲ್ಲ.

ಪಿರ್ಯಾದನಲ್ಲಿ ಹೇಳಿರುವ ವಿಷಯಗಳನ್ನು ನಾನು ತಿಳಿದುಕೊಂಡಿರುತ್ತೇನೆ. ನೀವು ನಿಮ್ಮ ಪಿರ್ಯಾದಿನಲ್ಲಿ ದಿಃ 15-06-2022 ಮತ್ತು ದಿಃ 13-09-2022 ರಂದು ಬ್ಯಾಂಕ್ ನಲ್ಲಿ ಚೆಕ್ ಅನ್ನು ಹಾಜರುಪಡಿಸಿರುತ್ತೇನೆ ಎಂದು ಹೇಳಿರುವಿರಾ ಆದರೆ ನೀವು 15-06-2022 ಹಿಂಬರಹ ಅಷ್ಟೇ ಹಾಜರುಪಡಿಸಿರುವಿರಾ ಮತ್ತು ದಿಃ 13-09-2022 ರ ಹಿಂಬರಹವನ್ನು ಹಾಜರುಪಡಿಸಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಇದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿಃ 15-06-2022 ರ ಹಿಂಬರಹವನ್ನು ಬ್ಯಾಂಕ್ ನವರು ಕೊಟ್ಟ ಬಳಿಕ ನೀವು ಆರೋಪಿಗೆ ನೋಟೀಸು ಅಥವಾ ಪೋನಿನ ಮುಖಾಂತರ ಕರೆ ಮಾಡಿ ಇದರ ಬಗ್ಗೆ ತಿಳಿಸಿರುವಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಸದರಿ ವಿಷಯದ ಬಗ್ಗೆ ಆರೋಪಿ ಗೆ ಪೋನಿನ ಮುಖಾಂತರ ಮತ್ತು ನೋಟೀಸಿನ ಮುಖಾಂತರ ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಮಗೆ ಆರೋಪಿಯ ದೂರವಾಣಿ ಸಂಖ್ಯೆ ಗೊತ್ತಿದೆಯೇ ಎಂಬ

ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಯ ಪರಿಚಯ ನಿಮಗೆ ಇರುವುದಿಲ್ಲ ಮತ್ತು ನೀವು ಚಾಮರಾಜನಗರ ಪೋಲೀಸ್ ಕಂಟ್ರೋಲ್ ರೂಂ ನಲ್ಲಿ ಕೆಲಸ ಮಾಡುತ್ತಿರುವ ಶಿವನಾಗಪ್ಪ ರವರಿಗೆ ಕೊಟ್ಟ ಚೆಕ್ ಅನ್ನು ಪಡೆದುಕೊಂಡು ನೀವು ಸದರಿ ಚೆಕ್ ಅನ್ನು ನೀಡಿರುವಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಚೆಕ್ ನಾನೇ ನೀಡಿರುತ್ತೇನೆ ಮತ್ತು ಶಿವನಾಗಪ್ಪರವರು ನನಗೆ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಶಿವನಾಗಪ್ಪರವರ ಪರಿಚಯ ನನಗೆ ಇರುತ್ತದೆ. ಆರೋಪಿ ನಿಮಗೆ ಯಾವುದೇ ಚೆಕ್ ಅನ್ನು ನೀಡಿರುವುದಿಲ್ಲ ಮತ್ತು ಶಿವನಾಗಪ್ಪರವರಿಗೆ ನೀಡಿದ ಚೆಕ್ ಅನ್ನು ನೀವು ಪಡೆದುಕೊಂಡು ಈ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಚೆಕ್ ನನ್ನದೇ ಆಗಿರುತ್ತದೆ ಮತ್ತು ನಾನು ಸುಳ್ಳು ಹೇಳುತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಎ ಎಸ್ ಐ ಆಗಿ ಕೆಲಸ ಮಾಡುತ್ತಿದ್ದರು ಮತ್ತು ನಿಮ್ಮಿಂದ ಹಣವನ್ನು ಪಡೆಯಲು ಅವರಿಗೆ ಯಾವುದೇ ದರದು ಇರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಆರೋಪಿ ನನ್ನಿಂದ ಹಣವನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ತುಮಕೂರಿನಲ್ಲಿ ವಾಸ ಮಾಡುತ್ತಿದ್ದ ಕಾರಣ ನಿಮಗೂ ಮತ್ತು ಅವರಿಗೆ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಹಣಕಾಸು ಯಾವತ್ತೂ ಕೂಡ ಬೇಕಾಗಿರುವುದಿಲ್ಲ ಮತ್ತು ಅವರು ನಿಮ್ಮಿಂದ ಕೂಡ ಹಣವನ್ನು ಪಡೆದುಕೊಂಡಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಆರೋಪಿ ನನ್ನಿಂದ ಹಣವನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ಮುಂದುವರಿದ ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**